ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂ:ಕಾಶಿಇ/ನ್ಯಾಕ್/08/ಸುತ್ತೋಲೆ/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು, ದಿನಾಂಕ:01.02.2024.

## ತಿದ್ದುಪಡಿ

**ವಿಷಯ:** ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳು ಹಾಗೂ ಬಿ.ಎಡ್. ಕಾಲೇಜುಗಳು ಎ.ಕ್ಯೂ.ಎ.ಆರ್. ಸಲ್ಲಿಸುವ ಬಗ್ಗೆ.

**ಉಲ್ಲೇಖ:** 1. ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ: 29.01.2024
2. ನ್ಯಾಕ್ ಸಂಸ್ಥೆಯ ಅಧಿಸೂಚನೆ ದಿನಾಂಕ:19.12.2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ: 29.01.2024 ರಲ್ಲಿ ನ್ಯಾಕ್ ಸಂಸ್ಥೆಯು 2016-17 ರಿಂದ 2021-22 ರವರೆಗಿನ ಬಾಕಿ ಇರುವ ಎಲ್ಲಾ ಎ.ಕ್ಯೂ.ಎ.ಆರ್.ಗಳನ್ನು ಸಲ್ಲಿಸಲು ಒಂದು ಅಂತಿಮ ಅವಕಾಶ ನೀಡಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಸದರಿ ದಿನಾಂಕವನ್ನು 2016-17 ರಿಂದ 2022-23 ಎಂಬುದಾಗಿ ತಿದ್ದಿ ಒದಿಕೊಳ್ಳತಕ್ಕದ್ದು, ಉಳಿದಂತೆ ಎಲ್ಲವೂ ಯಥಾವತ್ತಾಗಿ ಇರುತ್ತದೆ ಎಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ :

1. ಸಂಬಂಧಪಟ್ಟ ಎಲ್ಲಾ ಸರ್ಕಾರಿ / ಖಾಸಗಿ ಅನುದಾನಿತ ಕಾಲೇಜುಗಳು ಹಾಗೂ ಬಿ.ಎಡ್ ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ಐಕ್ಯೂಎಸಿ ಸಂಚಾಲಕರಿಗೆ - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರುಗಳು ಹಾಗೂ ನ್ಯಾಕ್ ವಿಶೇಷಾಧಿಕಾರಿಗಳು, ಪ್ರಾದೇಶಿಕ ಕಛೇರಿ, ಬೆಂಗಳೂರು / ಮೈಸೂರು / ಶಿವಮೊಗ್ಗ / ಧಾರವಾಡ / ಮಂಗಳೂರು / ಕಲಬುರ್ಗಿ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು :

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ- ಸದರಿ ಮಾಹಿತಿಯನ್ನು ಇಲಾಖೆಯ ವೆಬ್ ಸೈಟಿನಲ್ಲಿ ಪ್ರಕಟಿಸುವಂತೆ ಸೂಚಿಸಲಾಗಿದೆ.
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂ:ಕಾಶಿಇ/ನ್ಯಾಕ್/08/ಸುತ್ತೋಲೆ/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು, ದಿನಾಂಕ:29.01.2024.

**ಸುತ್ತೋಲೆ**

ವಿಷಯ: ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳು ಹಾಗೂ ಬಿ.ಎಡ್. ಕಾಲೇಜುಗಳು ಎ.ಕ್ಯೂ.ಎ.ಆರ್. ಸಲ್ಲಿಸುವ ಬಗ್ಗೆ.

ಉಲ್ಲೇಖ: ನ್ಯಾಕ್ ಸಂಸ್ಥೆಯ ಅಧಿಸೂಚನೆ ದಿನಾಂಕ:19.12.2023.

*****

ನ್ಯಾಕ್ ಮೌಲ್ಯಮಾಪನ / ಮರು ಮೌಲ್ಯಮಾಪನ ಪ್ರಕ್ರಿಯೆಗೆ ಒಳಪಟ್ಟ ಮೇಲ್ಕಂಡ ಉನ್ನತ ಶಿಕ್ಷಣ ಸಂಸ್ಥೆಗಳು ಪ್ರತಿವರ್ಷ ಎ.ಕ್ಯೂ.ಎ.ಆರ್. ವರದಿಗಳನ್ನು ನ್ಯಾಕ್ ಸಂಸ್ಥೆಗೆ ಆನ್‌ಲೈನ್ ಮುಖಾಂತರ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಉಲ್ಲೇಖಿತ ಅಧಿಸೂಚನೆಯನ್ವಯ ನ್ಯಾಕ್ ಸಂಸ್ಥೆಯು 2016-17 ರಿಂದ 2021-22 ರವರೆಗಿನ ಬಾಕಿ ಇರುವ ಎಲ್ಲಾ ಎ.ಕ್ಯೂ.ಎ.ಆರ್.ಗಳನ್ನು ಸಲ್ಲಿಸಲು ಒಂದು ಅಂತಿಮ ಅವಕಾಶ ನೀಡಿದ್ದು, ಸಲ್ಲಿಕೆಗೆ **ಕೊನೆಯ ದಿನಾಂಕ : 29.02.2024** ಎಂಬುದಾಗಿ ನಿಗದಿಪಡಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಇದುವರೆಗೂ ಎ.ಕ್ಯೂ.ಎ.ಆರ್.ಗಳನ್ನು ಸಲ್ಲಿಸದೇ ಬಾಕಿ ಇರುವ ಮೇಲ್ಕಂಡ ಉನ್ನತ ಶಿಕ್ಷಣ ಸಂಸ್ಥೆಗಳು ಯಾವುದೇ ವಿಳಂಬಕ್ಕೆ ಅವಕಾಶ ನೀಡದೇ **ದಿನಾಂಕ: 26.02.2024** ರ ಒಳಗಾಗಿ ಎ.ಕ್ಯೂ.ಎ.ಆರ್.ಗಳನ್ನು ಸಲ್ಲಿಸಿ, ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ವರದಿ ನೀಡುವಂತೆ ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ಪ್ರಾಂಶುಪಾಲರು ಮತ್ತು ಐ.ಕ್ಯೂ.ಎ.ಸಿ. ಸಂಚಾಲಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಿಳಿಸಲಾಗಿದೆ.

ಮುಂದುವರೆದು, ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್.ಕ್ಯೂ.ಎ.ಸಿ. ವಿಶೇಷಾಧಿಕಾರಿಗಳು ತಮ್ಮ ಕಛೇರಿಯ ವ್ಯಾಪ್ತಿಗೆ ಒಳಪಡುವ ಉನ್ನತ ಶಿಕ್ಷಣ ಸಂಸ್ಥೆಗಳು ಎ.ಕ್ಯೂ.ಎ.ಆರ್.ಗಳನ್ನು ಸಲ್ಲಿಸಿದ ಬಗ್ಗೆ ವಿವರವಾದ ಮಾಹಿತಿಯನ್ನು ಕೇಂದ್ರ ಕಛೇರಿಯ ರಾಜ್ಯ ಗುಣಮಟ್ಟ ಭರವಸಾ ಕೋಶ ವಿಭಾಗಕ್ಕೆ **ದಿನಾಂಕ: 28.02.2024** ರ ಒಳಗಾಗಿ ಸಲ್ಲಿಸತಕ್ಕದ್ದು ಎಂದು ಈ ಮೂಲಕ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಅಡಕ: ಉಲ್ಲೇಖಿತ ನ್ಯಾಕ್ ಸಂಸ್ಥೆಯ ಅಧಿಸೂಚನೆ

ಇವರಿಗೆ :

1. ಸಂಬಂಧಪಟ್ಟ ಎಲ್ಲಾ ಸರ್ಕಾರಿ / ಖಾಸಗಿ ಅನುದಾನಿತ ಕಾಲೇಜುಗಳು ಹಾಗೂ ಬಿ.ಎಡ್ ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ಐಕ್ಯೂಎಸಿ ಸಂಚಾಲಕರಿಗೆ - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರುಗಳು ಹಾಗೂ ನ್ಯಾಕ್ ವಿಶೇಷಾಧಿಕಾರಿಗಳು, ಪ್ರಾದೇಶಿಕ ಕಛೇರಿ, ಬೆಂಗಳೂರು / ಮೈಸೂರು / ಶಿವಮೊಗ್ಗ / ಧಾರವಾಡ / ಮಂಗಳೂರು / ಕಲಬುರ್ಗಿ - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು :

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ- ಸದರಿ ಮಾಹಿತಿಯನ್ನು ಇಲಾಖೆಯ ವೆಬ್ ಸೈಟಿನಲ್ಲಿ ಪ್ರಕಟಿಸುವಂತ ಸೂಚಿಸಲಾಗಿದೆ.
2. ಕಛೇರಿ ಪ್ರತಿ.